**ತರೀಕೆರೆ ತಾಲ್ಲೂಕಿನ ಜಂಬಡಹಳ್ಳಿ ಜಲಾಶಯದ ಕಾಮಗಾರಿಗೆ ಬಿಡುಗಡೆಯಾದ ಹಣ**

3215 (3663) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನ ಜಂಬದಹಳ್ಳ ಜಲಾಶಯಕ್ಕೆ ಹೋಡಿರಾಯನ ಹಳ್ಳದಿಂದ ನೀರು ಒದಗಿಸಲು ಪುನರ್ ಅಂದಾಜು ನಕ್ಷೆ ಆಗಿದೆಯೇ:

ಆ) ಈ ಅಂದಾಜು ನಕ್ಷೆಯಂತೆ ಈ ವರ್ಷ ಹಣ ಬಿಡುಗಡೆ ಮಾಡಲಾಗುವುದೇ:

ಇ) ಹೊಸದಾಗಿ ಅಂದಾಜು ನಕ್ಷೆಗೆ ಯಾವಾಗ ಕಾಮಗಾರಿಗೆ ಕ್ರಮ ಕೈಗೊಳ್ಳಲಾಗುವುದು:

ಈ) ಈ ಕಾಮಗಾರಿಗೆ ಈ ಆಯವ್ಯಯದಲ್ಲಿ ಬಿಡುಗಡೆಯಾಗಿರುವ ಹಣವೆಷ್ಟು:

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಜಂಬದ ಹಳ್ಳ ಜಲಾಶಯಕ್ಕೆ ಹೆಚ್ಚುವರಿ ನೀರನ್ನು ಒದಗಿಸಲು ಹೋಡಿರಾಯನ ಹಳ್ಳ ಸಂಪರ್ಕ ನಾಲೆಯ ಪಂಕ್ತಿಕರಣವು ಅರಣ್ಯ ಪ್ರದೇಶದಲ್ಲಿ ಬರುವುದರಿಂದ ಅರಣ್ಯ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಆ) ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಕ್ತ ಅನುದಾನ ಒದಗಿಸಲಾಗುವುದು.

ಇ) ಹೊಸದಾಗಿ ಸಿದ್ದಪಡಿಸಿದ ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಈ) ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಕ್ತ ಅನುದಾನ ಒದಗಿಸಲಾಗುವುದು.

**ಭದ್ರಾ ಜಲಾಶಯದ ಕಾಮಗಾರಿಯ ಗುತ್ತಿಗೆದಾರರಿಗೆ ಬಾಕಿ ಬಿಡುಗಡೆ ಬಗ್ಗೆ**

3216 (3664) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ–ಪ್ರಾಜೆಕ್ಟ್ ಜಲಾಶಯ ವ್ಯಾಪ್ತಿಯಲ್ಲಿ 2000–01, 2001–02ರಲ್ಲಿ ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ:

ಆ) ಕಾಮಗಾರಿಗಳನ್ನು ಯೋಜನಾವಾರು ನೀಡುವುದು "ಭದ್ರಾ" ಜಲಾಶಯ ಯೋಜನೆ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾದ ಬಿಲ್ಲಿನ ಮೊತ್ತವೆಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಭದ್ರಾ ಪ್ರಾಜೆಕ್ಟ್ ವ್ಯಾಪ್ತಿಯಲ್ಲಿ 2000–01ನೇ ಸಾಲಿನಲ್ಲಿ ಒಟು ರೂ. 1654.73 ಲಕ್ಷ ಹಾಗೂ 2001–02ನೇ ಸಾಲಿನಲ್ಲಿ ಒಟ್ಟು ರೂ. 1359.47 ಲಕ್ಷ ಹಣವು ಬಿಡುಗಡೆಯಾಗಿರುತ್ತದೆ. ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ಭದ್ರಾ ಜಲಾಶಯ ಯೋಜನೆ ವ್ಯಾಪ್ತಿಯಲ್ಲಿ ದಿನಾಂಕ 30.6.2003 ರಂದು ಇರುವಂತೆ ಗುತ್ತಿಗೆದಾರರಿಗೆ ಕೊಡಬೇಕಾದ ಬಾಕಿ ಬಿಲ್ಲಿನ ಮೊತ್ತ ರೂ. 1937.71 ಲಕ್ಷ ಗಳಾಗಿರುತ್ತದೆ. ಅನುಬಂಧ–2 ರಲ್ಲಿ ಯೋಜನಾವಾರು ವಿವರಗಳನ್ನು ನೀಡಲಾಗಿದೆ.

ಅನುಬಂಧ - 1

ರೂ. ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಯೋಜನೆ | 2000–2001 ಹಣ ಬಿಡುಗಡೆ | 2001–2002 ಹಣ ಬಿಡುಗಡೆ |
|---|---|---|---|
| 1. | 4701 ಭದ್ರಾ ಯೋಜನೆ | 154.47 | 328.04 |
| 2. | 4701 ಭದ್ರಾ ಆಧುನೀಕರಣ ಯೋಜನೇತರ | 855.22 | 227.18 |
| 3. | 2701 ಭದ್ರಾ ಯೋಜನೆ | 317.20 | 385.61 |
| 4. | 2701 ಗೊಂದಿ ಅಣೆಕಟ್ಟು | 12.84 | 8.80 |
| 5. | 2705 ಕಾಡಾ | 315.00 | 409.84 |
| | **ಒಟ್ಟು** | **1654.73** | **1359.47** |

ಅನುಬಂಧ -2

ರೂ. ಲಕ್ಷಗಳಲಿ

| ಕ್ರಮ ಸಂಖ್ಯೆ | ಯೋಜನೆಗಳ ವಿವರ | ಜೂನ್ – 03 ರಲ್ಲಿ ಬಾಕಿ ಉಳಿದ ಬಿಲ್ಲುಗಳು |
|---|---|---|
| 1. | 4701 – ಭದ್ರಾ ಯೋಜನೆ | 279.04 |
| 2. | 4701 – ಭದ್ರಾ ಆಧುನೀಕರಣ | 422.07 |
| 3. | 2701 – ಭದ್ರಾ ಯೋಜನೆ | 848.76 |
| 4. | 2701–ಗೊಂದಿ ಅಣೆಕಟ್ಟು | 24.63 |
| 5. | 2705 – ಕಾಡಾ | 363.21 |
| | **ಒಟ್ಟು** | **1937.71** |

**ಚಿಕ್ಕಮಗಳೂರು ಜಿಲ್ಲೆಯ ಜಲಾನಯನ ಇಲಾಖೆಯಲ್ಲಿ ಕೈಗೊಂಡ ಕಾಮಗಾರಿಗಳು**

3217 (3665) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಜಲಾನಯನ ಇಲಾಖೆಯಲ್ಲಿ ಕಳೆದ ಎರಡು ವರ್ಷದಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಂಡಿದೆ;

ಆ) ಬಿಡುಗಡೆಯಾದ ಹಣವನ್ನು ತಾಲ್ಲೂಕುವಾರು ನೀಡುವುದು;

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಡಿ.ಪಿ.ಎ.ಪಿ ಸಂಘಗಳಿವೆ; ಈ ಸಂಘಗಳಿಗೆ ಬಿಡುಗಡೆಯಾದ ಹಣವೆಷ್ಟು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳ ಅವಧಿಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ ಒಟ್ಟು 4122 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಅವುಗಳ ವರ್ಷವಾರು ವಿವರಗಳು ಕೆಳಕಂಡಂತಿವೆ.